**ಎಸ್.ಸಿ. ನಂ.54/2020**

**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 05.07.2024**

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

*1.* ವಡ್ಡರದೊಡ್ಡಿ ಗ್ರಾಮದಲ್ಲಿ ಯಾರೋ ನನ್ನ ತಮ್ಮನನ್ನು ಹೊಡೆದು ಹಾಕಿರುತ್ತಾರೆಂದು ಬೆಳಗಿನ ಜಾವ *6.00* ಗಂಟೆ ನನಗೆ ವಿಷಯ ಗೊತ್ತಾಯಿತು, ಹೊರಗಡೆ ಮಾತನಾಡುತ್ತಿದ್ದ ವ್ಯಕ್ತಿಗಳ ಹೆಸರು ಗೊತ್ತಿಲ್ಲ ಅದರ ಆಧಾರದ ಮೇಲೆ ಅಭಿಷೇಕ್ ಎಂಬುವವರು ನನಗೆ ಪೋನು ಮಾಡಿ ತಿಳಿಸಿದರು. ಅಭಿಷೇಕ್ ರವರ ಪೋನು ನಂಬರ್ ನನಗೆ ಗೊತ್ತಿಲ್ಲ. ಸದರಿ ವಿಷಯವನ್ನು ನಾನು ಪೊಲೀಸರಿಗೆ ಹೇಳಿಲ್ಲ.

*2.* ನಮ್ಮ ಊರಿನಿಂದ ವಡ್ಡರದೊಡ್ಡಿಗೆ *4-5* ಕಿ.ಮೀ. ದೂರ ಆಗುತ್ತದೆ. *6.00* ಗಂಟೆಗೆ ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

*3.* ಹಿಂದೆ ಮೃತ ಹಾಗೂ *1* ನೇ ಆರೋಪಿ ನಡುವೆ ಗಲಾಟೆಯಾದ ಬಗ್ಗೆ ಕೇಸು ನಂಬರ್ ನನಗೆ ಗೊತ್ತಿಲ್ಲ. ನನ್ನ ತಮ್ಮನ ಸಾವಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

(ಮರು ವಿಚಾರಣೆಃ ಇಲ್ಲ.)
(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)
ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.